# ವಾರ್ತಾ ವಿಶ್ಲೇಷಣೆ

## ವಿಷಾದಯೋಗ

ಶ್ರೀಮದ್ಭಗವದ್ಗೀತೆಯು ಅರ್ಜುನನ ವಿಷಾದದೊಂದಿಗೆ (*depression*) ಪ್ರಾರಂಭವಾಗುತ್ತದೆ. ಅವನ ವಿಷಾದವನ್ನು ಹೋಗಲಾಡಿಸುವುದಕ್ಕೆ ಅಲ್ಲಿ ಶ್ರೀಕೃಷ್ಣನಿದ್ದ. ಅವನು ಅರ್ಜುನನಿಗೆ ಆ್ಯಂಟಿ ಡಿಪ್ರೆಸೆಂಟ್ ಗುಳಿಗೆ ನೀಡಲಿಲ್ಲ. ಜೀವನಕ್ಕೆ ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಧ್ಯೇಯವಿದೆ ಎಂಬುದನ್ನು ತೋರಿಸಿಕೊಟ್ಟು ಅವನ ವಿಷಾದವನ್ನು ಹೋಗಲಾಡಿಸಿದನು.

ಈಗ ಇಂತಹ ಅರ್ಜುನರ ಸಂಖ್ಯೆ ಮಿತಿಮೀರಿ ಬೆಳೆಯುತ್ತಿದೆ. ಅರ್ಜುನನ ವಿಷಾದಕ್ಕೆ ಕುರುಕ್ಷೇತ್ರ ಯುದ್ಧ ಕಾರಣವಾಗಿತ್ತು. ಈಗ ಕುರುಕ್ಷೇತ್ರವಂತಾಗಿರುವ ಕರ್ಮಕ್ಷೇತ್ರವೂ ಇದಕ್ಕೆ ಕಾರಣವಾಗಿದೆ ಎನ್ನಬಹುದು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಇಡೀ ಪ್ರಪಂಚದಲ್ಲಿ ಸುಮಾರು ೪೦೦ ಮಿಲಿಯನ್ ಜನರು ವಿಷಾದ (*depression*), ಆಲ್ಜೈಮರ್ ಮತ್ತು ಮೂರ್ಛೆ ರೋಗಗಳಿಂದ ನರಳುತ್ತಿದ್ದಾರೆ.

ಇಂದು ಪ್ರಪಂಚದಲ್ಲಿ ವಿಷಾದವು ಸಾವು ಮತ್ತು ಅಸಾಮರ್ಥ್ಯಗಳಿಗೆ ಐದನೆಯ ಪ್ರಧಾನ ಕಾರಣವಾಗಿದೆ. ೨೦೨೦ರ ವೇಳೆಗೆ ವಿಷಾದವು ಸಾವಿನ ಕಾರಣಗಳಲ್ಲಿ ಎರಡನೆಯ ಉನ್ನತ ಸ್ಥಾನವನ್ನು ಪಡೆಯುತ್ತದಂತೆ. ವಿಷಾದ ತೀವ್ರವಾದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಒಂದು ವರ್ಷದಲ್ಲಿ ವಿಶ್ವದಾದ್ಯಂತ ೧೦ ಮಿಲಿಯನ್ ಜನರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ, ಅವರಲ್ಲಿ ಒಂದು ಮಿಲಿಯನ್ ಜನರು ಸಾಯುತ್ತಾರೆ. ಈ ಖಾಯಿಲೆಗೆ ಶ್ರೀಮಂತ ಮತ್ತು ಬಡದೇಶಗಳೆಂಬ ಭೇದವಿಲ್ಲ.

ಈ ವಿಷಾದವೆಂಬ ಖಾಯಿಲೆಗೆ ಮುಖ್ಯಕಾರಣ ಪರಸ್ಪರ ಮಾನವೀಯ ಸಂಬಂಧ ಹೊರಟುಹೋಗಿರುವುದು ಮತ್ತು ತೀವ್ರ ಒಂಟಿತನದ ಭಾವ. ಡಾ. ಡೀನ್ ಆರ್ನಿಶ್ *Love and Survival* ಎಂಬ ತಮ್ಮ ಗ್ರಂಥದಲ್ಲಿ ಹೇಳುತ್ತಾರೆ: 'ನಮ್ಮ ಸಂಸ್ಕೃತಿಯನ್ನು ಕಾಡುತ್ತಿರುವ ನಿಜವಾದ ರೋಗ ಭೌತಿಕ ಹೃದ್ರೋಗ ಮಾತ್ರವಲ್ಲ, ಅದಕ್ಕಿಂತಲೂ ಅಧಿಕವಾಗಿ ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಹೃದ್ರೋಗ. ಅದಾವುದೆಂದರೆ ತೀವ್ರವಾದ ಒಂಟಿತನದ ಭಾವ, ಪ್ರತ್ಯೇಕತೆ, ಪರಕೀಯತೆ ಮತ್ತು ವಿಷಾದ. ಇವು ಈಗ ನಮ್ಮ ಸಂಸ್ಕೃತಿಯಲ್ಲಿ ವಿಸ್ತೃತವಾಗಿ ಹರಡಿಕೊಂಡಿವೆ. ಒಂದು ಸಾಮೂಹಿಕಭಾವವನ್ನೂ ಸಂಬಂಧವನ್ನೂ ನೀಡುತ್ತಿದ್ದ ಸಾಮಾಜಿಕ ರಚನೆಯೇ ಕುಸಿದುಹೋಗಿರುವುದು ಇವಕ್ಕೆ ಕಾರಣ.'

☆

## ಒಳಿತಿನ ಹಂಬಲ

ಅಮೆರಿಕನರ ಉದಾರ ಪ್ರವೃತ್ತಿಯನ್ನು ಅಲ್ಲಿಯ ಹಿಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್ ಮುಕ್ತವಾಗಿ ಹೊಗಳಿದ್ದಾರೆ. ೧೯೯೯ರಲ್ಲಿ ಅಮೆರಿಕನರು ೧೯೦ ಬಿಲಿಯನ್ ಡಾಲರ್‌ಗಳನ್ನು ಬೇರೆ ಬೇರೆ ಸೇವಾ ಕಾರ್ಯಗಳಿಗಾಗಿ ದಾನ ನೀಡಿದ್ದಾರಂತೆ. ೧೯೯೫ರಿಂದ ಈಚೆಗೆ, ಅಮೆರಿಕದ ಆರ್ಥಿಕ ಅಭಿವೃದ್ಧಿ ತ್ವರಿತಗತಿಯಲ್ಲಿ ಮುನ್ನಡೆದಂತೆಲ್ಲ, ಈ ದಾನ ಶೇ.೪೧ರಷ್ಟು ಅಧಿಕವಾಗಿದೆಯಂತೆ. ಕಳೆದ ವರ್ಷ ಅಮೆರಿಕದ ೧೦ ಕುಟುಂಬಗಳಲ್ಲಿ ಏಳು ಕುಟುಂಬಗಳು ಒಂದಾದರೂ ದಾನಕಾರ್ಯವನ್ನು ಮಾಡಿವೆಯಂತೆ.

ನಾವು ಅಮೆರಿಕನರನ್ನು ಭೌತವಾದಿಗಳು, ಇಂದ್ರಿಯ ಲೋಲುಪರು, ಡಾಲರ್ ಪೂಜಕರು ಎಂದೆಲ್ಲ ನಿಂದಿಸುತ್ತೇವೆ. ಈ ನಿಂದೆಯ ಮೂಲಕ ನಾವೇ ಅಂಥವರೆಂಬುದನ್ನು ತೋರಿಸಿಕೊಳ್ಳುತ್ತಿದ್ದೇವೆ, ಅಷ್ಟೆ. ಇತರರ ದೋಷಗಳನ್ನು ಎತ್ತಿ ತೋರಿಸುವಾಗ ನಮ್ಮ ದೋಷಗಳನ್ನೇ ಇತರರ ಮೇಲೆ ಆರೋಪಿಸುತ್ತೇವೆ ಎಂಬುದು ಮನಶ್ಶಾಸ್ತ್ರಜ್ಞರ ಅಭಿಪ್ರಾಯ. 'ಉದ್ವೇಗಪೂರ್ಣವಾಗಿ ಜಗತ್ತಿನ ರಾಕ್ಷಸೀಶಕ್ತಿಗಳ ವಿರುದ್ಧ ಹೋರಾಡುವುದು ನಮ್ಮೊಳಗೇ ಇರುವ ಆ ಶಕ್ತಿಗಳ ವಿರುದ್ಧ ಹೋರಾಡಿದಂತೆ' ಎಂದು ಕೆನ್ ವಿಲ್ಬರ್ ಹೇಳುತ್ತಾರೆ.

ಅಮೆರಿಕನರನ್ನು ನಾವು ಎಷ್ಟೇ ನಿಂದಿಸಿದರೂ ಅವರ ಅನೇಕ ವಿಷಯಗಳನ್ನು ಅನುಕರಿಸುತ್ತೇವೆ. ಅಮೆರಿಕನ್ ಸಂಸ್ಕೃತಿಯೇ ಈಗ ಎಲ್ಲೆಲ್ಲಿಯೂ ಕಂಡುಬರುತ್ತಿರುವುದು. ಆದರೆ ಅವರಲ್ಲಿ ಕಂಡುಬರುವ ಈ ದಾನಶೀಲ ಮನೋಭಾವ, ಕಾರ್ಯೋತ್ಸಾಹ, ಕಾರ್ಯದಕ್ಷತೆ, ನವನವಾನ್ವೇಷಣೆಯ ತುಡಿತ ಇತ್ಯಾದಿ ಗುಣಗಳನ್ನು ನಾವೇಕೆ ಅಳವಡಿಸಿಕೊಳ್ಳಬಾರದು? ಇವು ನಮ್ಮ ಸಂಸ್ಕೃತಿಗೆ ವಿರುದ್ಧವಾದುವುಗಳಲ್ಲ.

ಆದರೆ ಇವುಗಳ ಬದಲು ಅವರ ಪಾಪ್ ಸಂಗೀತ, ಡಿಸ್ಕೊ ಡ್ಯಾನ್ಸ್, ಸಿನಿಮಾ ಮುಂತಾದುವುಗಳನ್ನು ನಮ್ಮ ಜನರು, ವಿಶೇಷವಾಗಿ ಯುವಕರು ಅನುಕರಿಸುತ್ತಾರೆ. ಇಂತಹ ಅನುಕರಣೆ ನಮ್ಮಲ್ಲಿ ಒಂದು ಬಗೆಯ ಕೀಳರಿಮೆ ಇರುವುದನ್ನು ಸೂಚಿಸುತ್ತದೆ. ನಮ್ಮ ಬಗ್ಗೆ, ನಮ್ಮ ಸಂಸ್ಕೃತಿಯ ಬಗ್ಗೆ ಸಕಾರಾತ್ಮಕ ಭಾವ ನಮಗಿದ್ದರೆ, ಹೆಮ್ಮೆ ಇದ್ದರೆ, ಆಗ ಇತರ ಸಂಸ್ಕೃತಿಯಲ್ಲಿ ಕಂಡುಬರುವ ಒಳ್ಳೆಯ ಅಂಶಗಳನ್ನು ಗುರುತಿಸುವ ಮತ್ತು ಹೀರಿಕೊಳ್ಳುವ ಸಾಮರ್ಥ್ಯ ನಮಗೆ ಬರುತ್ತದೆ.

☆